### ಸಂಗೀತಗಾರರಿಗೆ ವಿಶೇಷ ಪೋಷಾಕು

ದಸರಾ ಮಹೋತ್ಸವದಲ್ಲಿ ಆಗ ಸಂಗೀತ ಕಛೇರಿಗಳು ಅದ್ದೂರಿಯಾಗಿ ನಡೆಯುತ್ತಿದ್ದವು. ಕಲಾವಿದರಿಗೆಲ್ಲ ಮೈಸೂರಿನ 'ಸೀತಾ ವಿಲಾಸ್ ಚೌಲ್ಟ್ರಿ'ಯಲ್ಲಿ ವಸತಿ ವ್ಯವಸ್ಥೆ ಮಾಡುತ್ತಿದ್ದರು. ದಸರಾ ಉತ್ಸವದ ಸಿಂಹಾಸನಾರೋಹಣ ಆದ ಮೇಲೆ ಇಲ್ಲಿ ಉಳಿದುಕೊಂಡ ಯಾವ ಕಲಾವಿದರು 'ಸೀಮೋಲ್ಲಂಘನ' ಮಾಡುವ ಹಾಗಿಲ್ಲ ಎಂಬುದು ರಾಜರ ಆಜ್ಞೆ. ಸಂಗೀತಗಾರರಿಗೆ ಪೋಷಾಕುಗಳನ್ನೂ ಅಲ್ಲೇ ಕೊಡುತ್ತಿದ್ದರು. ಕಪ್ಪು ಬಣ್ಣದ ಉದ್ದದ ಕೋಟು, ಪೈಜಾಮ ಹಾಗೂ ಮೈಸೂರು ಪೇಟ ಜೊತೆಗೆ ಕೈ ಮೇಲೆ 'ಕಮರ್‌ಬಂಧ್' ಎಂಬ ಪಟ್ಟಿಯನ್ನು ಕಲಾವಿದರು ತೊಟ್ಟುಕೊಳ್ಳುವುದು ಕಡ್ಡಾಯವಾಗಿತ್ತು. ಆಸ್ಥಾನ ವಿದ್ವಾಂಸರಿಗೆ ಹಾಗೂ ಅವರ ಕುಟುಂಬದವರಿಗೆ ಓಡಾಡಲು ಕರ್ಟನ್ ಇರುವಂಥ ಸಾರೋಟು ವ್ಯವಸ್ಥೆ ಮಾಡುತ್ತಿದ್ದರು. ಇಂಥ ಸಾರೋಟಿನಲ್ಲಿ ಸಾಗಿದ ವಿದ್ವಾಂಸರ ಕುಟುಂಬದ ಮಹಿಳೆಯರಿಗೆ ಮಹಾರಾಣಿಯವರು ಬೆಳ್ಳಿಯ ಉಡುಗೊರೆ ಇರುವ ಬಾಗಿನ ನೀಡಿ ಸತ್ಕರಿಸುತ್ತಿದ್ದರು.



ವೀಣೆ ವಿದ್ವಾನ್ ಆರ್. ವಿಶ್ವೇಶ್ವರನ್



ವಿದ್ವಾನ್ ಡಿ. ಬಾಲಕೃಷ್ಣ

# ಸಂಗೀತದ ಹಲವು ಹಿರಿಮೆಗಳ ಮೈಸೂರು

**ಮೈಸೂರಿನ ಗಾಯಕ ವಿದ್ವಾನ್ ಆರ್.ಎಸ್. ನಂದಕುಮಾರ್ ಸಂದರ್ಶನ**

**◆ ಸಂಗೀತ ನಗರಿಯ ಪೊಲೀಸ್ ಬ್ಯಾಂಡ್ ನಾದಗೋಷ್ಠಿಯ ಸೊಬಗನ್ನು ನೆನಪಿಸಿಕೊಳ್ಳಬಹುದೆ?**

ಅರಮನೆ ನಗರಿಯಾದ ಮೈಸೂರಿನ ವೈಭವಗಳಲ್ಲಿ 'ಮೈಸೂರು ಪೊಲೀಸ್ ಬ್ಯಾಂಡ್ ಸಂಗೀತ' ಪ್ರಮುಖವಾದುದು. ವರ್ಣರಂಜಿತ ಪೋಷಾಕುಗಳಲ್ಲಿ, ವಿಧವಿಧವಾದ ಸಂಗೀತವಾದ್ಯಗಳನ್ನು ನುಡಿಸುತ್ತ, ನಾದಕ್ಕೆ ಮನಸೋತು ಹಸನ್ಮುಖಿಗಳಾಗಿ ಸಂಗೀತದ ಕಂಪನ್ನು ನೀಡುವ ಈ ನಾದಗೋಷ್ಠಿಯ ವಿದ್ವಾಂಸರನ್ನು ನೋಡುತ್ತಾ ಅವರ ಸಂಗೀತವನ್ನು ಸವಿಯುತ್ತಾ ಆನಂದಿಸುವುದೇ ಚೆಂದ.

**◆ ಮೈಸೂರಿನ ಸಂಗೀತ ಇತಿಹಾಸವನ್ನು ನೀವು ಹೇಗೆ ವಿಶ್ಲೇಷಿಸುತ್ತೀರಿ?**

ದಸರಾ ಸಂಗೀತ ಐತಿಹಾಸಿಕ ನೆಲೆಗಟ್ಟನ್ನು ಹೊಂದಿದೆ.1673ರಿಂದ 1704ರವರೆಗೆ ವೈಭವವಾಗಿ ಕನ್ನಡನಾಡನ್ನಾಳಿದ ನವಕೋಟಿನಾರಾಯಣ ಶ್ರೀಚಿಕ್ಕದೇವರಾಯರು, 'ರಾಜಾಜಗದೇವ್' ಎಂಬ ಬಿರುದನ್ನು ಔರಂಗಜೇಬನಿಂದ ಪಡೆದು, ರಾಜಲಾಂಛನ ಸೂಚಕ ಸಂಗೀತಕ್ಕಾಗಿ ನೌಬತ್ ಎಂಬ ಒಂದು ಸಂಗೀತಗೋಷ್ಠಿಯನ್ನು ಏರ್ಪಡಿಸಿದ್ದರು. ಅಲ್ಲಿಂದೀಚೆಗೆ ಇಂತಹ ಸಂಗೀತ ನೌಬತ್‌ಖಾನೆಗಳು ಸಂಗೀತ ಗೋಷ್ಠೀತಾಣಗಳಾಗಿ ಕನ್ನಡನಾಡಿನಲ್ಲಿ ಮೆರೆಯುತ್ತಿವೆ. ಭಾರತದ ದೇಸೀ ಸಂಸ್ಥಾನಗಳಲ್ಲಿ ಸಂಗೀತ ವಾದ್ಯಮೇಳವೊಂದು ಸರ್ಕಾರದಿಂದ ಮೊಟ್ಟಮೊದಲು ಸ್ಥಾಪಿಸಿಕೊಂಡ ಹೆಮ್ಮೆಯು ಮೈಸೂರಿನದು. ಅದೂ 1868ರಷ್ಟು ಹಿಂದೆಯೇ! ಅದೇ ವರ್ಷದ ಸೆ. 23ರಂದು ನವರಾತ್ರಿಯ ಪಾಡ್ಯಮಿಯಂದು 6ರ ಪ್ರಾಯದ ಚಾಮರಾಜ ಒಡೆಯರ್ ಅವರಿಗೆ ರಾಜ್ಯ ಪಟ್ಟಾಭಿಷೇಕ ನಡೆಯಿತು. ಆ ಒಡ್ಡೋಲಗದಲ್ಲಿ 'ಅರಮನೆಯ ಬ್ಯಾಂಡ್' ಅದ್ದೂರಿ ಸಂಗೀತ ಪ್ರದರ್ಶನ ನೀಡಿತು. ಅಲ್ಲಿಂದೀಚೆಗೆ ಕ್ರಮವಾಗಿ ತನ್ನ ಪ್ರಸಿದ್ಧಿಯಲ್ಲೂ ವಾದ್ಯವೈವಿಧ್ಯಗಳಲ್ಲೂ ಮುಂದುವರೆದ ಅರಮನೆಯ ಈ ಬ್ಯಾಂಡ್, ಕರ್ನಾಟಕ ಸಂಗೀತ ಮತ್ತು ಹಿಂದೂಸ್ತಾನಿ ಸಂಗೀತ ಶೈಲಿಗಳನ್ನೂ ಕೃತಿಗಳನ್ನೂ ಮೇಳೈಸಿಕೊಂಡು ಅದ್ಭುತ ರಸಪಾಕವಾಗಿ ಸಹೃದಯರ ಮನತಣಿಸಿದೆ.



ಆಸ್ಥಾನ ವಿದ್ವಾಂಸರಿಗೆ ನೀಡುತ್ತಿದ್ದ ಗಂಡಭೇರುಂಡ ಇರುವ ತೋಡ

ಸಂಗೀತ ಮಾತ್ರವಲ್ಲದೆ ಸುಗಮ, ಜಾನಪದ, ವಾದ್ಯಸಂಗೀತ, ಜಾನಪದ ನೃತ್ಯ ಕಲಾಪ್ರಕಾರಗಳು, ಹರಿಕಥೆ, ಗಮಕ, ಸಾಮಾಜಿಕ, ಪೌರಾಣಿಕ, ಹಾಸ್ಯ ನಾಟಕಗಳು, ಯಕ್ಷಗಾನ, ತಾಳಮದ್ದಳೆ, ಸೂತ್ರದ ಗೊಂಬೆ, ತೊಗಲುಗೊಂಬೆ ಪ್ರದರ್ಶನ ದಸರಾ ಮಹೋತ್ಸವವನ್ನು ಕಳೆಗಟ್ಟಿಸುತ್ತಿದೆ. ಹತ್ತು ದಿನಗಳಲ್ಲಿ ಹಬ್ಬದ ವಾತಾವರಣ ಇಡೀ ಜಗತ್ತನ್ನೇ ನಿಬ್ಬೆರಗಾಗುವಂತೆ ಮಾಡುತ್ತಿದೆ.

### ರಾಜರ ಕಾಲದ ಸಂಗೀತ ಹಬ್ಬ

'ದಸರಾ ಸಂಗೀತ ಎಂದಾಗ, ಎಪ್ಪತ್ತರ ದಶಕದ ಸಂಗೀತೋತ್ಸವವನ್ನು ನೆನಪಿಸಿಕೊಂಡರೆ ಈಗಲೂ ಪುಳಕ ಆಗುತ್ತೆ. ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ನಂತರ ನಾಲ್ವಡಿ ಜಯಚಾಮರಾಜೇಂದ್ರ ಒಡೆಯರ್ ಅವರ ಕಾಲದಲ್ಲಿ, ಮೈಸೂರು ಅರಮನೆಯ ದರ್ಬಾರ್ ಹಾಲ್‌ನಲ್ಲಿ ಸಂಗೀತ ಕಛೇರಿಗಳು